ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ. ಅಂಕಗಳ ಆಧಾರಿತ ಉನ್ನತ ಎ.ಜಿ.ಪಿ. (Higher AGP) ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ದಿನಾಂಕ : 24.12.2009ರ ಸಂಖ್ಯೆ: ಇಡಿ 37 ಯುಎನ್‌ಇ 2009ರ ಆದೇಶ.
2. ಯು.ಜಿ.ಸಿ.ಯ ದಿನಾಂಕ :30.06.2010ರ ಸಂಖ್ಯೆ : ಎಫ್3-1/ 2009 ರ ನಿಯಮಗಳು.
3. ಯು.ಜಿ.ಸಿ. ಅರೆ ಸರ್ಕಾರಿ ಪತ್ರ ಸಂಖ್ಯೆ: ಎಫ್1.2/ 2009 (EC/PS)V(i)vol-II. ದಿ:14.06.2013 ರೊಂದಿಗೆ ಲಗತ್ತಿಸಿರುವ ದಿ:13.06.2013ರ ಯು.ಜಿ.ಸಿ. ನಿಯಮಗಳ ತಿದ್ದುಪಡಿ ಆದೇಶ.
4. ಸರ್ಕಾರದ ದಿನಾಂಕ : 25.09.2014ರ ಸಂಖ್ಯೆ: ಇಡಿ 382 ಯುಎನ್‌ಇ 2012ರ ಆದೇಶ.
5. ಸರ್ಕಾರದ ದಿನಾಂಕ : 19.09.2007 ರ ಸಂಖ್ಯೆ:ಇಡಿ/200/ ಯುಎನ್‌ಇ/2003ರ ಸುತ್ತೋಲೆ.
6. ಸರ್ಕಾರದ ದಿನಾಂಕ : 19.12.2011 ಹಾಗೂ ದಿನಾಂಕ : 05.05.2015 ರ ಸಂಖ್ಯೆ: ಇಡಿ/242/ಡಿಸಿಇ/2011 ರ ಪತ್ರ..
7. ಈ ಕಛೇರಿಯ ದಿನಾಂಕ : 19.05.2015 ರ ಸಂಖ್ಯೆ:ಕಾಶಿಇ/27/ಸಿಎಎಸ್/2010-11/ಬಸ್ಥಾವಿ ಹಾಗೂ ದಿ:03.10.2015 ಮತ್ತು 31.10.2015 ರ ಸಂಖ್ಯೆ : ಕಾಶಿಇ/16/ಸಿಎಎಸ್/2015-16/ಬಸ್ಥಾವಿ ರ ಸುತ್ತೋಲೆಗಳು.
8. ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ ಸ್ವೀಕೃತವಾಗಿರುವ ಪ್ರಾಂಶುಪಾಲರ ಹಂತದ ಪರಿಶೀಲನಾ ಸಮಿತಿಯ ವರದಿಗಳು ಹಾಗೂ ಪ್ರಸ್ತಾವನೆಗಳು.

* * * *

**ಪ್ರಸ್ತಾವನೆ :**

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅರ್ಹ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಉಲ್ಲೇಖ (1)ರನ್ವಯ 2006ರ ಯು.ಜಿ.ಸಿ. ವೇತನ ಶ್ರೇಣಿಗಳಲ್ಲಿ (ರೂ.15,600-39,100) ಎ.ಪಿ.ಐ. ಅಂಕಗಳ ಆಧಾರಿತ ಉನ್ನತ ಎ.ಜಿ.ಪಿ.ಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖ(2)ರ ಯು.ಜಿ.ಸಿ. ನಿಯಮಗಳಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಸಹಾಯಕ ಪ್ರಾಧ್ಯಾಪಕರುಗಳಿಗೆ ಎ.ಪಿ.ಐ. ಅಂಕಗಳ ಆಧಾರಿತ ಉನ್ನತ ಎ.ಜಿ.ಪಿ.ಗೆ ಸ್ಥಾನೀಕರಣ ನೀಡುವ ಸಂಬಂಧ ಯು.ಜಿ.ಸಿ.ಯು ಅನುಬಂಧ-3ರ ಟೇಬಲ್-1ರ ಕೆಟಗರಿ I, II ಮತ್ತು III ಗಳಿಗೆ ಉಲ್ಲೇಖ(3)ರಲ್ಲಿ ತಿದ್ದುಪಡಿ ಆದೇಶ ಹೊರಡಿಸಲಾಗಿರುತ್ತದೆ. ಆದರೆ ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಸಂಬಂಧಿಸಿದಂತೆ ಉಲ್ಲೇಖ (2)ರಲ್ಲಿನ ಯು.ಜಿ.ಸಿ. ಮಾರ್ಗಸೂಚಿಗಳು ಮುಂದುವರೆದಿರುತ್ತದೆ.

ಸರ್ಕಾರಿ ಆದೇಶ ಮತ್ತು ಯು.ಜಿ.ಸಿ.ಯ ಉಲ್ಲೇಖ (1) ರಿಂದ (3)ರವರೆಗಿನ ಆದೇಶಗಳನ್ವಯ 2006ರ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಗಳಲ್ಲಿ ಕೆಲವು ಷರತ್ತುಗಳಿಗೊಳಪಟ್ಟು ಎ.ಪಿ.ಐ. ಅಂಕಗಳ ಆಧಾರಿತ ಉನ್ನತ ಎ.ಜಿ.ಪಿ.ಗೆ ವೃತ್ತಿಪದೋನ್ನತಿ (Career Advancement Scheme) ಮಂಜೂರು ಮಾಡಲು ಉಲ್ಲೇಖ (4)ರ ಸರ್ಕಾರಿ ಆದೇಶದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಉಲ್ಲೇಖ (1) ರಿಂದ (6) ರವರೆಗಿನ ಯುಜಿಸಿ ಮಾರ್ಗಸೂಚಿ, ಸರ್ಕಾರದ ಆದೇಶ ಮತ್ತು ಪತ್ರಗಳ ಪ್ರಕಾರ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ **ರೂ. 6000/- ರಿಂದ ರೂ. 7000/-ಕ್ಕೆ** ಎ.ಜಿ.ಪಿ. ಮಂಜೂರು ಮಾಡುವ ಸಂಬಂಧದಲ್ಲಿ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಹಂತದಲ್ಲಿ, ಉಲ್ಲೇಖ (1)ರ ಸರ್ಕಾರಿ ಆದೇಶದ ನಿಯಮ 20.03.2 ರಂತೆ ವಿಭಾಗದ ಮುಖ್ಯಸ್ಥರು ಹಾಗೂ ವಿಶ್ವವಿದ್ಯಾಲಯದ ಪ್ರತಿನಿಧಿಯನ್ನೊಳಗೊಂಡಂತೆ ಸಮಿತಿಯನ್ನು ರಚಿಸಿಕೊಂಡು ಸಹಾಯಕ ಪ್ರಾಧ್ಯಾಪಕರುಗಳಿಗೆ ಸಂಬಂಧಿಸಿದಂತೆ ಟೇಬಲ್-1, ದೈಹಿಕ ಶಿಕ್ಷಣ ಬೋಧಕರುಗಳಿಗೆ ಸಂಬಂಧಿಸಿದಂತೆ ಟೇಬಲ್-4 ಹಾಗೂ ಗ್ರಂಥಪಾಲಕರುಗಳಿಗೆ ಸಂಬಂಧಿಸಿದಂತೆ ಟೇಬಲ್-7ರ (Category-1,2,3) ನಮೂನೆ, ಪ್ರಮಾಣ ಪತ್ರಗಳು ಹಾಗೂ ದಾಖಲಾತಿಗಳನ್ನು ಟೇಬಲ್-2, 5(ಬಿ), 8(ಬಿ) ಮತ್ತು ಟೇಬಲ್-3, 6, 9 ಗಳ ಪ್ರಕಾರ ಕೂಲಂಕಷವಾಗಿ ಪರಿಶೀಲಿಸಿ, ಎ.ಪಿ.ಐ. ಅಂಕಗಳನ್ವಯ ಉನ್ನತ ಎ.ಜಿ.ಪಿ.ಗೆ ಅರ್ಹರಿರುವವರ ಮಾಹಿತಿಗಳನ್ನು ಮಾತ್ರ ನಿಗದಿತ ನಮೂನೆ-1 ಮತ್ತು 2 ರಲ್ಲಿ ಸಮಿತಿಯ ಶಿಫಾರಸ್ಸಿನೊಂದಿಗೆ ಅನುಮೋದನೆಗೆ ಸಲ್ಲಿಸುವಂತೆ ಉಲ್ಲೇಖ (7)ರ ಸುತ್ತೋಲೆಗಳಲ್ಲಿ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಮತ್ತು ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ತಿಳಿಸಲಾಗಿದೆ. ಈ ಪ್ರಕಾರವಾಗಿ ಪ್ರಾಂಶುಪಾಲರ ಹಂತದ ಸಮಿತಿಯು ಅರ್ಹ ಸಹಾಯಕ ಪ್ರಾಧ್ಯಾಪಕರುಗಳಿಗೆ ಉನ್ನತ ಎ.ಜಿ.ಪಿ.ಯ ಸ್ಥಾನೀಕರಣಕ್ಕಾಗಿ ಶಿಫಾರಸ್ಸು ಮಾಡಿ ಪ್ರಸ್ತಾವನೆಗಳನ್ನು ಕಳುಹಿಸಿಕೊಟ್ಟಿರುತ್ತಾರೆ. ಸಂಬಂಧಿಸಿದ ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನ ಮೇರೆಗೆ ಇಲಾಖಾ ವೃತ್ತಿ ಪದೋನ್ನತಿ ಸಮಿತಿಯ ತೀರ್ಮಾನದಂತೆ ಉನ್ನತ ಎ.ಜಿ.ಪಿ ಮಂಜೂರು ಮಾಡಲು ಈ ಆದೇಶ.

**ಆದೇಶ ಸಂಖ್ಯೆ:ಕಾಶಿಇ/01/ಎಜಿಪಿ/2018-19/ಬಸ್ಥಾವಿ ಬೆಂಗಳೂರು, ದಿನಾಂಕ : 02.07.2018**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಉಲ್ಲೇಖ-4 ರ ದಿನಾಂಕ : 25.09.2014ರ ಸರ್ಕಾರಿ ಆದೇಶದಂತೆ ಸಂಬಂಧಿಸಿದ ಪ್ರಾಂಶುಪಾಲರ ಹಂತದ ಸಮಿತಿಯ ಶಿಫಾರಸ್ಸಿನ ಮೇರೆಗೆ, ಇಲಾಖಾ ವೃತ್ತಿ ಪದೋನ್ನತಿ ಸಮಿತಿಯ ತೀರ್ಮಾನದಂತೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಹೆಸರಿಸಿರುವ **ಒಟ್ಟು 57 ಬೋಧಕರಿಗೆ ರೂ.6000/- ರಿಂದ ರೂ.7000/-** ಕ್ಕೆ ಉನ್ನತ ಎ.ಜಿ.ಪಿಯನ್ನು 2006ರ ಯು.ಜಿ.ಸಿ. ವೇತನ ಶ್ರೇಣಿ ರೂ.15600-39100 ರಲ್ಲಿ ಕೆಳಕಂಡ ಷರತ್ತುಗಳಿಗೊಳಪಟ್ಟು ಅವರ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಿಂದ ಜಾರಿಯಾಗುವಂತೆ ಮಂಜೂರು ಮಾಡಿ ಆದೇಶ ಹೊರಡಿಸಲಾಗಿದೆ.

**ಷರತ್ತುಗಳು :**

1. 2006ರ ಯುಜಿಸಿ ವೇತನ ಶ್ರೇಣಿಗಳಲ್ಲಿನ ಎ.ಪಿ.ಐ ಅಂಕಗಳ ಆಧಾರಿತ ಎ.ಜಿ.ಪಿ ಮಂಜೂರಾತಿಯು ಉಲ್ಲೇಖ (1) ರಿಂದ (4) ರವರೆಗಿನ ಯುಜಿಸಿ/ಸರ್ಕಾರದ ಮಾರ್ಗಸೂಚಿ/ ಆದೇಶಗಳಲ್ಲಿನ ನಿಬಂಧನೆಗೊಳಪಟ್ಟಿರುತ್ತದೆ.

2. APPENDIX-III, Table-I, IV, VII (Category I, II & III) ರಲ್ಲಿ ನಿಗದಿಪಡಿಸಿರುವ ಎಲ್ಲಾ ಅಂಶಗಳನ್ನು ಪೂರೈಸಿರುವ ಬಗ್ಗೆ ಸಂಬಂಧಿಸಿದ ಪ್ರಾಂಶುಪಾಲರ ಹಂತದ ಸಮಿತಿಯು ಪರಿಶೀಲಿಸಿ ಶಿಫಾರಸ್ಸು ಮಾಡಿರುವುದರಿಂದ ಎ.ಜಿ.ಪಿ ಮಂಜೂರಾತಿಗೆ ಅನುಮೋದನೆ ನೀಡಲಾಗಿದ್ದು, ಸಂಪೂರ್ಣ ಜವಾಬ್ದಾರಿ ಸಮಿತಿಯದ್ದಾಗಿರುತ್ತದೆ. ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಯಾವುದೇ ತಪ್ಪು ಮಾಹಿತಿಗಳನ್ನು ಒದಗಿಸಿರುವುದು ಕಂಡು ಬಂದಲ್ಲಿ ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರ ಎ.ಜಿ.ಪಿ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆಯನ್ನು ನೀಡದೇ ಹಿಂಪಡೆಯಲಾಗುವುದು. ತಪ್ಪು ಮಾಹಿತಿ ಒದಗಿಸಿದ ಉಪನ್ಯಾಸಕರು ಹಾಗೂ ಶಿಫಾರಸ್ಸು ಮಾಡಿದ ಪ್ರಾಂಶುಪಾಲರುಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು.

3. ಉಲ್ಲೇಖ (5) ಹಾಗೂ (6)ರನ್ವಯ ಎಂ.ಫಿಲ್/ಪಿಹೆಚ್.ಡಿ. ಪದವಿಯನ್ನು "ನೇಮಕಾತಿಗೆ" ಅಥವಾ "ವಿಶೇಷ ಮುಂಗಡ ವೇತನ ಬಡ್ತಿ" ಗೆ ಇವುಗಳಲ್ಲಿ ಯಾವುದಾದರೂ ಒಂದು ಸೌಲಭ್ಯಕ್ಕೆ ಪರಿಗಣಿಸಿದ್ದಲ್ಲಿ ನಂತರ ಸದರಿ ಎಂ.ಫಿಲ್/ಪಿಹೆಚ್.ಡಿ. ಪದವಿಯನ್ನು ಸಿ.ಎ.ಎಸ್‌ರಡಿಯಲ್ಲಿ "ಉನ್ನತ ಎ.ಜಿ.ಪಿ" ಸೌಲಭ್ಯಕ್ಕೆ ಹಾಗೂ "ಸೇವಾವಧಿಯ ವಿನಾಯಿತಿ"ಗೆ ಪರಿಗಣಿಸಲು ಅವಕಾಶವಿರುವುದಿಲ್ಲ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಉನ್ನತ ಎ.ಜಿ.ಪಿ.ಗೆ ಶಿಫಾರಸ್ಸು ಮಾಡುವ ಜವಾಬ್ದಾರಿ ಸಮಿತಿಯದ್ದಾಗಿದ್ದು, ಈ ಆದೇಶದನ್ವಯ ಉನ್ನತ ಎ.ಜಿ.ಪಿ ಮಂಜೂರು ಮಾಡಿರುವ ಪ್ರಕರಣಗಳಲ್ಲಿ ಯಾವುದೇ ಸಹಾಯಕ ಪ್ರಾಧ್ಯಾಪಕರುಗಳು ಎಂ.ಫಿಲ್/ಪಿ.ಹೆಚ್.ಡಿಯನ್ನು ವಿಶೇಷ ಮುಂಗಡ ವೇತನ ಬಡ್ತಿ ಮತ್ತು ಎ.ಜಿ.ಪಿ ಎರಡೂ ಸೌಲಭ್ಯಗಳನ್ನು ಪಡೆದಿರುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಒಂದೊಮ್ಮೆ ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಸದರಿ ಸೌಲಭ್ಯವನ್ನು ಹಿಂಪಡೆಯುವ ಹಾಗೂ ಪಡೆಯಲಾಗಿರುವ ಆರ್ಥಿಕ ಸೌಲಭ್ಯಗಳನ್ನು ಹಿಂಪಡೆದು ಶಿಸ್ತು ಕ್ರಮವನ್ನು ಜರುಗಿಸಲಾಗುವುದು.

4. ಎ.ಜಿ.ಪಿ.ಗೆ ಸೇವಾ ವಿನಾಯಿತಿ ಪಡೆದಿರುವ ಸಹಾಯಕ ಪ್ರಾಧ್ಯಾಪಕರಿಂದ ಮುಂಗಡ ವೇತನ ಬಡ್ತಿ ಸೌಲಭ್ಯ ಪಡೆದಿರುವುದಿಲ್ಲವೆಂಬ ಬಗ್ಗೆ ಹಾಗೂ ಮುಂದೆಯೂ ಪಡೆಯುವುದಿಲ್ಲವೆಂಬ ಬಗ್ಗೆ ಮುಚ್ಚಳಿಕೆ ಪತ್ರ ಪಡೆಯತಕ್ಕದ್ದು. ಹಾಗೂ ದೃಢೀಕರಣದ ವಿವರಗಳನ್ನು ಸೇವಾ ಪುಸ್ತಕದಲ್ಲಿ ನಮೂದಿಸತಕ್ಕದ್ದು. ಸದರಿ ಪತ್ರದ ದೃಢೀಕೃತ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸತಕ್ಕದ್ದು.

5. ಎಂ.ಫಿಲ್/ಪಿಹೆಚ್.ಡಿ. ಪ್ರಯುಕ್ತ ಮುಂಗಡ ವೇತನ ಬಡ್ತಿ ಮಂಜೂರಾಗಿದ್ದಲ್ಲಿ ಅಥವಾ ಮುಂಗಡ ವೇತನ ಬಡ್ತಿಗಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಸದರಿ ಆದೇಶ/ಪ್ರಕ್ರಿಯೆ ರದ್ದುಗೊಂಡ ನಂತರ ಉನ್ನತ ಎ.ಜಿ.ಪಿ.ಗಾಗಿ ಸೇವಾ ವಿನಾಯಿತಿಗೆ ಪರಿಗಣಿಸಬೇಕಾಗಿರುತ್ತದೆ.

6. ಈ ಕಛೇರಿಯ ಉಲ್ಲೇಖ (7)ರ ಸುತ್ತೋಲೆಗಳಲ್ಲಿ ಸೂಚಿಸಿರುವಂತೆ ಸಹಾಯಕ ಪ್ರಾಧ್ಯಾಪಕರುಗಳ ಖಾಯಂ ನೇಮಕಾತಿ ದಿನಾಂಕ, ಯು.ಜಿ.ಸಿ. ವೇತನ ನಿಗಧೀಕರಣದ ದಿನಾಂಕ, ಸೇವಾ ಪೂರ್ವ ಅವಧಿಯ ಘೋಷಣೆ ದಿನಾಂಕ, ವೇತನ ರಹಿತ ರಜೆ/ಅನಧಿಕೃತ ಗೈರು ಹಾಜರಿ, ಇಲಾಖಾ ವಿಚಾರಣೆ/ಶಿಸ್ತು ಕ್ರಮದ ಬಗ್ಗೆ ಮಾಹಿತಿ, ನಿಗದಿತ ರಿಫ್ರೆಷರ್/ಓರಿಯಂಟೇಷನ್ ಕೋರ್ಸ್‌ಗಳನ್ನು ಪೂರೈಸಿರುವುದು ಹಾಗೂ ಇನ್ನಿತರೆ ಎಲ್ಲಾ ಅಂಶಗಳಿಗೆ ಸಂಬಂಧಿಸಿದಂತೆ ಸಮಿತಿಯು ಪರಿಶೀಲಿಸಿರುವ ಷರತ್ತಿಗೊಳಪಟ್ಟಿರುತ್ತದೆ.

7. ಸಹಾಯಕ ಪ್ರಾಧ್ಯಾಪಕರುಗಳು ಸಲ್ಲಿಸಿರುವ ಉನ್ನತ ಎ.ಜಿ.ಪಿ ಪ್ರಸ್ತಾವನೆಗಳನ್ನು ಸಂಬಂಧಿಸಿದ ಕಾಲೇಜಿನ ಹಂತದ ಸಮಿತಿಯ ಪರಿಶೀಲನೆಯ ನಂತರ ಪ್ರಸ್ತಾವನೆ, ಸಮಿತಿಯ ಶಿಫಾರಸ್ಸು, ಎ.ಜಿ.ಪಿ ಮಂಜೂರಾತಿ ಆದೇಶ ಹಾಗೂ ಇನ್ನಿತರೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಕಾಲೇಜಿನಲ್ಲಿ ಸಂರಕ್ಷಿಸಲು ತಿಳಿಸಲಾಗಿದೆ. ಈ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು /ಗ್ರಂಥಪಾಲಕರುಗಳಿಗೆ ಮುಂದೆ ಸಹ ಪ್ರಾಧ್ಯಾಪಕರ ಹಂತದ (Associate Professor) ವೃತ್ತಿ ಪದೋನ್ನತಿ ಮಂಜೂರು ಮಾಡುವ ಸಂಬಂಧದಲ್ಲಿ "ಇಲಾಖಾ ಪರಿಶೀಲನಾ ಸಮಿತಿ"ಯ (Screening-cum-Evaluation Committee) ಕಾಲೇಜಿಗೆ ಭೇಟಿ ನೀಡುವ ಸಂದರ್ಭದಲ್ಲಿ ಸದರಿ ದಾಖಲಾತಿಗಳನ್ನು ಸಮಿತಿಯ ಪರಿಶೀಲನೆಗೆ ಮಂಡಿಸಬೇಕಾಗಿರುತ್ತದೆ. ಆದುದರಿಂದ ಎ.ಜಿ.ಪಿ ಮಂಜೂರಾತಿಗೆ ಸಂಬಂಧಿಸಿದಂತೆ ಯಾವುದೇ ತಪ್ಪು ಮಾಹಿತಿಗಳನ್ನು ಸಲ್ಲಿಸಿರುವುದು ಕಂಡು ಬಂದಲ್ಲಿ ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರು ಹಾಗೂ ಪ್ರಾಂಶುಪಾಲರ ಮೇಲೆ ಶಿಸ್ತುಕ್ರಮ ಕೈಗೊಳ್ಳಲಾಗುವುದು.

8. ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ರಾಜ್ಯ ವೇತನ ಶ್ರೇಣಿಯಲ್ಲಿ ಸೇವಾ ಸಕ್ರಮಾತಿಗೊಂಡಿರುವ ಉಪನ್ಯಾಸಕರು ಯು.ಜಿ.ಸಿ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು (NET/SLET/M.PHIL/PH.D) ಪಡೆದಿರುವ ದಿನಾಂಕದಿಂದ ಮಾತ್ರ (Issue of Certificate Date) ಯು.ಜಿ.ಸಿ ವೇತನ ಶ್ರೇಣಿ ನಿಗದಿಪಡಿಸಲಾಗಿದ್ದು, ಅದರಂತೆ ಎ.ಜಿ.ಪಿ. ಮಂಜೂರಾತಿಗಾಗಿ ಪರಿಗಣಿಸಲಾಗಿದೆ. ಸದರಿ ದಿನಾಂಕದ ಬಗ್ಗೆ ಪ್ರಾಂಶುಪಾಲರು ಮತ್ತೊಮ್ಮೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

9. ಎನ್.ಇ.ಟಿ/ಎಸ್.ಎಲ್.ಇ.ಟಿ. ವಿದ್ಯಾರ್ಹತೆಯನ್ನು ಪಡೆದಿರಲಿ ಅಥವಾ ಪಡೆಯದೇ ಇರಲಿ ಇಂತಹ ಯಾವುದೇ ಸಹಾಯಕ ಪ್ರಾಧ್ಯಾಪಕರು ನಿಗಧಿತ ಅವಧಿಯೊಳಗೆ ಎಂ.ಫಿಲ್ ಹಾಗೂ ಪಿ.ಹೆಚ್.ಡಿ. ಈ ಎರಡೂ ಪದವಿಗಳನ್ನು ಪಡೆದಿದ್ದಲ್ಲಿ, ಈ ಪೈಕಿ ಎಂ.ಫಿಲ್ ಅಥವಾ ಪಿಹೆಚ್.ಡಿ.ಗಳಲ್ಲಿ ಒಂದು ಪದವಿಯನ್ನು ನೇಮಕಾತಿಗೆ ಅಥವಾ ಹೆಚ್ಚುವರಿ ವೇತನ ಬಡ್ತಿ ಸೌಲಭ್ಯಕ್ಕೆ ಪರಿಗಣಿಸಿದ್ದಲ್ಲಿ ಇನ್ನೊಂದು ಪದವಿಯನ್ನು ಎ.ಜಿ.ಪಿ.ಯಲ್ಲಿನ ಸೇವಾ ವಿನಾಯಿತಿಗೆ ಪರಿಗಣಿಸಲಾಗುವುದು. ಇಂತಹ ಪ್ರಕರಣಗಳಲ್ಲಿ ಮಾತ್ರ ಎ.ಜಿ.ಪಿ.ಯಲ್ಲಿ ಸೇವಾ ವಿನಾಯಿತಿ ನೀಡಲಾಗಿದೆ. ಈ ಸಂಬಂಧದಲ್ಲಿ ಸರ್ಕಾರದಿಂದ ಹೊರಡಿಸಬಹುದಾದ ಆದೇಶ/ಮಾರ್ಗದರ್ಶನದನ್ವಯ ಕ್ರಮ ಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

10. ದೂರ ಶಿಕ್ಷಣ ಮುಖೇನ (Distance Mode) ಎಂ.ಫಿಲ್ ಪಡೆದಿರುವ ಅಭ್ಯರ್ಥಿಗಳ ಆಯ್ಕೆ ಪ್ರಕರಣವು ಸರ್ವೋಚ್ಛ ನ್ಯಾಯಾಲಯದಲ್ಲಿ (ಎಸ್.ಎಲ್.ಪಿ ಸಂಖ್ಯೆ:35608-20/2013 ಮತ್ತು 36714-736-2013) ದಾಖಲಾಗಿದ್ದು, ನ್ಯಾಯಾಲಯದ ಅಂತಿಮ ತೀರ್ಪಿನನ್ವಯ ಕ್ರಮಕೈಗೊಳ್ಳುವ ಹಾಗೂ ದೂರ ಶಿಕ್ಷಣದ ಮುಖೇನ ಪಡೆದಿರುವ ಎಂ.ಫಿಲ್, ಪಿ.ಹೆಚ್.ಡಿ ಪದವಿಗಳ ಮಾನ್ಯತೆಗೆ ಸಂಬಂಧಿಸಿದಂತೆ ಸರ್ಕಾರದ ಕಾನೂನು ಇಲಾಖೆಯ ಆದೇಶ/ ಸೂಚನೆಯನ್ವಯ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

11. ಎ.ಜಿ.ಪಿ ಮಂಜೂರಾತಿಯು ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ/ ಸುತ್ತೋಲೆ/ಪತ್ರಗಳಲ್ಲಿ ನಿಗದಿಪಡಿಸುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

12. ಸಹಾಯಕ ಪ್ರಾಧ್ಯಾಪಕರುಗಳ ವೃತ್ತಿ ಪದೋನ್ನತಿ (ಸಿ.ಎ.ಎಸ್-ಎ.ಜಿ.ಪಿ) ಯನ್ನು ಸೇವಾ ಜ್ಯೇಷ್ಠತೆಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

13. ಈ ಆದೇಶದನ್ವಯ ಮಂಜೂರು ಮಾಡಲಾದ ಎ.ಜಿ.ಪಿ.ಯು ಸ್ಥಳೀಯ/ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಟ್ಟಿದ್ದು, ಯಾವುದೇ ಅಸಂಗತೆಗಳು ಕಂಡು ಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

14. ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳ ಎ.ಜಿ.ಪಿ ಮಂಜೂರಾತಿಯ ವಿವರಗಳನ್ನು ಸಂಬಂಧಪಟ್ಟ ನೌಕರರ ಸೇವಾ ಪುಸ್ತಕದಲ್ಲಿ ನಮೂದಿಸತಕ್ಕದ್ದು.

15. ಎ.ಜಿ.ಪಿ ಮಂಜೂರಾತಿ ಆದೇಶದ ಮೇರೆಗೆ ಪ್ರಾಂಶುಪಾಲರುಗಳು ಎಲ್ಲಾ ದಾಖಲಾತಿಗಳನ್ನು ಮತ್ತೊಮ್ಮೆ ಪರಿಶೀಲಿಸಿದ ನಂತರ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳ ವೇತನ ನಿಗದೀಕರಣಕ್ಕಾಗಿ ಅಗತ್ಯ ಪ್ರಸ್ತಾವನೆಯನ್ನು ಮಹಾಲೇಖಪಾಲರ ಕಛೇರಿಗೆ ಕಳುಹಿಸುವ ಬಗ್ಗೆ ಕ್ರಮಕೈಗೊಳ್ಳತಕ್ಕದ್ದು.

16. ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012 ಹಾಗೂ ತಿದ್ದುಪಡಿ ನಿಯಮಗಳು 2015ರನ್ವಯ ಸರ್ಕಾರಿ ನೌಕರರು ಸರ್ಕಾರದಿಂದ ನಿಗದಿಪಡಿಸಲಾಗಿರುವ ಅಧಿಕೃತ ಏಜೆನ್ಸಿಯಿಂದ (KEONICS) ನಡೆಸಲಾಗುವ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಬೇಕಾಗಿರುತ್ತದೆ. ಆದುದರಿಂದ ಈ ಆದೇಶದಲ್ಲಿ ಎ.ಜಿ.ಪಿ. ಮಂಜೂರಾಗಿರುವ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರುಗಳು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು. ಈ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಹಾಗೂ ಈ ಸಹಾಯಕ ಪ್ರಾಧ್ಯಾಪಕರು /

(4)

ದೈಹಿಕ ಶಿಕ್ಷಣ ಬೋಧಕರು/ಗ್ರಂಥಪಾಲಕರುಗಳು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಸಲ್ಲಿಸುವಂತಹ ಪ್ರಮಾಣ ಪತ್ರಗಳನ್ನು ಅವರುಗಳ ಎ.ಜಿ.ಪಿ. ದಾಖಲಾತಿಗಳೊಂದಿಗೆ ಕಾಲೇಜಿನಲ್ಲಿ ಸಂರಕ್ಷಿಸಿಡುವಂತೆ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.

*(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)*

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

<u>ಇವರಿಗೆ:</u>

1. ಮಹಾಲೇಖಪಾಲರು, GE IV A (ಎ & ಇ ಲೆಕ್ಕ ಪರಿಶೋಧನೆ-1, ಲೆಕ್ಕ ಪರಿಶೋಧನೆ-2) ಕರ್ನಾಟಕ ರಾಜ್ಯ, ಬೆಂಗಳೂರು-560 001 – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ. ಮೇಲ್ಕಂಡ ಆದೇಶವನ್ನು ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳ ಗಮನಕ್ಕೆ ತರುವಂತೆ ಸೂಚಿಸಲಾಗಿದೆ ಹಾಗೂ **ಅನುಬಂಧ ದಲ್ಲಿನ** ಸಂಬಂಧಪಟ್ಟ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳು ಉನ್ನತ ಎ.ಜಿ.ಪಿ.ಗೆ ವರದಿ ಮಾಡಿಕೊಂಡ ಬಗ್ಗೆ ಸಿ.ಟಿ.ಸಿ., ಅಂತಿಮ ವೇತನ ಪ್ರಮಾಣ ಪತ್ರಗಳೊಂದಿಗೆ ವೇತನ ನಿಗದೀಕರಣಕ್ಕಾಗಿ ಅವರ ಸೇವಾ ಪುಸ್ತಕದೊಂದಿಗೆ ಪ್ರಸ್ತಾವನೆಯನ್ನು ನೇರವಾಗಿ ಮಹಾಲೇಖಪಾಲರು, GE IV A (ಎ & ಇ ಲೆಕ್ಕ ಪರಿಶೋಧನೆ-1, ಲೆಕ್ಕ ಪರಿಶೋಧನೆ-2) ಕರ್ನಾಟಕ, ಬೆಂಗಳೂರು-560 001 ಇವರಿಗೆ ಕಳುಹಿಸಿ ಕೊಡುವಂತೆ ಸೂಚಿಸಲಾಗಿದೆ.
3. ಎಲ್ಲಾ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿ ಹಾಗೂ ಅಗತ್ಯವಿದ್ದಲ್ಲಿ ಸೂಕ್ತ ಕ್ರಮಕ್ಕಾಗಿ
4. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮೇಲ್ಕಂಡ ಆದೇಶ ಹಾಗೂ **ಅನುಬಂಧವನ್ನು** ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧದಲ್ಲಿ ಅಗತ್ಯ ಕ್ರಮಕ್ಕಾಗಿ.

<u>ಪ್ರತಿಯನ್ನು :</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು -560 001 – ಮಾಹಿತಿಗಾಗಿ.
2. ವ್ಯವಸ್ಥಾಪಕರು/ಅಧೀಕ್ಷಕರು, ಆಯವ್ಯಯ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ವ್ಯವಸ್ಥಾಪಕರು/ಅಧೀಕ್ಷಕರು, ಸೇವಾ ವಿಭಾಗ-1, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ.

## ಕಾಲೇಜು ಶಿಕ್ಷಣ ಇಲಾಖೆ

### ಅನುಬಂಧ

### ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/-) ಮಂಜೂರು ಮಾಡಲಾಗಿರುವ ಪಟ್ಟಿ.

| ಕ್ರ. ಸಂ. | ಹೆಸರು ಶ್ರೀ/ಶ್ರೀಮತಿ | ವಿಷಯ | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು | ಖಾಯಂ ನೇಮಕಾತಿ ದಿನಾಂಕ | ಯು.ಜಿ.ಸಿ ವೇತನ ಶ್ರೇಣಿ ವಿಸ್ತರಿಸಿರುವ ದಿನಾಂಕ | ಶಿಫಾರಸ್ಸು ಮಾಡಿರುವ ವಿವರ | | | ಷರಾ |
|---|---|---|---|---|---|---|---|---|---|
| | | | | | | ಎ.ಜಿ.ಪಿ | ಅರ್ಹತಾ ದಿನಾಂಕ | ಆರ್ಥಿಕ ಸೌಲಭ್ಯಕ್ಕೆ ಅರ್ಹತೆ ಪಡೆದ ದಿನಾಂಕ | |
| ಸಂಖ್ಯೆ : ಕಾಶಿಇ/01/ಎಜಿಪಿ/2018-19/ಬಸ್ಥಾವಿ, ದಿನಾಂಕ : 02.07.2018 | | | | | | | | | |
| 1 | 2 | 3 | 4 | 5 | 6 | 7 | 8 | 9 | 10 |
| 1 | ಮಾರುತೇಶ ಬಿ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೊಪ್ಪಳ | 14-07-2003 | 22-12-2007 | 7000 | 22-12-2013 | 22-12-2013 | ------------ |
| 2 | ಶ್ರೀಕಾಂತ್ ಆರ್ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೆ ಆರ್ ಪುರಂ ಬೆಂಗಳೂರು | 02-02-2008 | 02-02-2008 | 7000 | 02-02-2014 | 02-02-2014 | ------------ |
| 3 | ಭಾರತಿ ಆರ್ ದಂಡಿನ | ಗ್ರಂಥಪಾಲಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಲಘಟಗಿ | 26-07-2010 | 26-07-2010 | 7000 | 26-07-2016 | 26-07-2016 | ------------ |
| 4 | ಡಾ ಸುಭಾಶಚಂದ್ರ ಎಂ | ರಾಜ್ಯಶಾಸ್ತ್ರ | ಸರ್ಕಾರಿ ಮಹಾವಿದ್ಯಾಲಯ ಕಲಬುರಗಿ | 05-09-2009 | 05-09-2009 | 7000 | 05-09-2015 | 05-09-2015 | ------------ |
| 5 | ಸುನೀಲ ನಡಕಟ್ಟ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಬಾಗಲಕೋಟೆ 587 101 | 25-06-2010 | 25-06-2010 | 7000 | 25-06-2016 | 25-06-2016 | ------------ |
| 6 | ನಿತೀಶ ಭೂಶೆಟ್ಟಿ | ಆಂಗ್ಲಭಾಷೆ | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಜೇವರ್ಗಿ ಕಾಲೋನಿ ಕಲಬುರಗಿ | 05-09-2009 | 05-09-2009 | 7000 | 05-09-2015 | 05-09-2015 | ------------ |

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/-) ಮಂಜೂರು ಮಾಡಲಾಗಿರುವ ಪಟ್ಟಿ.

| ಸಂಖ್ಯೆ : ಕಾಶಿಇ/01/ಎಜಿಪಿ/2018-19/ಬಸ್ಥಾವಿ, ದಿನಾಂಕ : 02.07.2018 | | | | | | | | | |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 7 | ಮಾರುತಿ ರಾ ಜೋಶಿ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ವಿಜಯಪುರ | 22-01-2008 | 22-01-2008 | 7000 | 22-01-2014 | 22-01-2014 | ----------- |
| 8 | ರಮೇಶ ಟಿ ಬಳ್ಳೊಳ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ವಿಜಯಪುರ | 05-09-2009 | 05-09-2009 | 7000 | 05-09-2015 | 05-09-2015 | ----------- |
| 9 | ಪುಟ್ಟರಾಜು ಎಸ್ ಜೆ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೆಚ್ ಡಿ ಕೋಟೆ ಮೈಸೂರು | 29-06-2010 | 29-06-2010 | 7000 | 29-06-2016 | 29-06-2016 | ----------- |
| 10 | ಡಾ ರವಿಚಂದ್ರ ನಾಯ್ಕ | ಗ್ರಂಥಪಾಲಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬೆಳಂದೂರು ಪುತ್ತೂರು | 07-02-2008 | 07-02-2008 | 7000 | 07-02-2014 | 07-02-2014 | ----------- |
| 11 | ಮೀನಾಕ್ಷಿ ಮಡಿವಾಳರ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಸ್ನಾತಕೋತ್ತರ ಅಧ್ಯಯನ ಕೇಂದ್ರ ಬೈಲಹೊಂಗಲ | 03-09-2009 | 03-09-2009 | 7000 | 03-09-2015 | 03-09-2015 | ----------- |
| 12 | ಚಿದಾನಂದ ಎಸ್ ಆನೂರ | ರಾಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ವಿಜಯಪುರ | 31-10-2007 | 31-10-2007 | 7000 | 31-10-2013 | 31-10-2013 | ----------- |
| 13 | ಕೃಷ್ಣಮೂರ್ತಿ | ಗ್ರಂಥಪಾಲಕರು | ಸರ್ಕಾರಿ ರಾಂ ನಾರಾಯಣ್ ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಬೆಂಗಳೂರು 560 001 | 07-07-2010 | 07-07-2010 | 7000 | 07-07-2016 | 07-07-2016 | ----------- |

6

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/-) ಮಂಜೂರು ಮಾಡಲಾಗಿರುವ ಪಟ್ಟಿ.

| ಸಂಖ್ಯೆ : ಕಾಶಿಇ/01/ಎಜಿಪಿ/2018-19/ಬಸ್ಥಾವಿ, ದಿನಾಂಕ : 02.07.2018 | | | | | | | | | |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 14 | ಜವರಪ್ಪ ಡಿ ಜೆ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಮಡಿಕೇರಿ | 12-07-2003 | 11-09-2006 | 7000 | 11-09-2012 | 11-09-2012 | ಎಸ್.ಎಲ್.ಇ.ಟಿ. ಅರ್ಹತಾ ಪ್ರಮಾಣ ಪತ್ರ ನೀಡಿದ (Date of Issue) ದಿನಾಂಕ: 11.09.2006 ರಿಂದ ಯು.ಜಿ.ಸಿ. ವೇತನ ಶ್ರೇಣಿ ವಿಸ್ತರಿಸಿದ ದಿನಾಂಕವೆಂದು ಪರಿಗಣಿಸಲಾಗಿದೆ. |
| 15 | ವಿಶ್ವಚಂದ್ರ ಬಿ ಕೆ | ರಾಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಫ್ರೇಜರ್ ಟೌನ್ ಬೆಂಗಳೂರು 560 005 | 24-07-2003 | 22-03-2008 | 7000 | 22-03-2014 | 22-03-2014 | ------------ |
| 16 | ಚಂದ್ರಪ್ಪ ಎಚ್ ಎಸ್ | ಅರ್ಥಶಾಸ್ತ್ರ | ಶ್ರೀ ಕೆ ಹೆಚ್ ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಲಕೋಟಿ ಗದಗ ಜಿಲ್ಲೆ | 14-07-2003 | 10-09-2007 | 7000 | 10-09-2013 | 10-09-2013 | ------------ |
| 17 | ಸತೀಶ್ ಕುಮಾರ್ ಕೆ ಆರ್ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸುಳ್ಯ ದಕ್ಷಿಣ ಕನ್ನಡ ಜಿಲ್ಲೆ 574 239 | 25-06-2010 | 25-06-2010 | 7000 | 25-06-2016 | 25-06-2016 | ------------ |
| 18 | ಡಾ ಸಂಜೀವಕುಮಾರ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಮ್ನಾಬಾದ್ ಬೀದರ್ ಜಿಲ್ಲೆ | 28-10-2009 | 28-10-2009 | 7000 | 28-10-2015 | 07-02-2016 | ಆರ್.ಸಿ. ಪೂರೈಸಿದ ಮರು ದಿನಾಂಕ :07-02-2016 ರಿಂದ ಆರ್ಥಿಕ ಸೌಲಭ್ಯ ನೀಡಲಾಗಿದೆ. |
| 19 | ಜಯಶ್ರೀ ಕೆ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕ್ಯಾತನಹಳ್ಳಿ ಪಾಂಡಪುರ ತಾಲ್ಲೂಕು ಮಂಡ್ಯ ಜಿಲ್ಲೆ | 01-07-2010 | 01-07-2010 | 7000 | 01-07-2016 | 01-07-2016 | ------------ |
| 20 | ಡಾ ಎಂ ಎನ್ ಕುಮಾರಸ್ವಾಮಿ | ರಸಾಯನಶಾಸ್ತ್ರ | ಸರ್ ಎಂ ವಿ ಸರ್ಕಾರಿ ವಿಜ್ಞಾನ ಕಾಲೇಜು ಬೊಮ್ಮನಕಟ್ಟೆ ಭದ್ರಾವತಿ 577 301 | 17-07-2006 | 17-07-2006 | 7000 | 17-07-2012 | 17-07-2012 | ------------ |

(7)

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/-) ಮಂಜೂರು ಮಾಡಲಾಗಿರುವ ಪಟ್ಟಿ.

ಸಂಖ್ಯೆ : ಕಾಶಿಇ/01/ಎಜಿಪಿ/2018-19/ಬಸ್ಥಾವಿ, ದಿನಾಂಕ : 02.07.2018

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 21 | ಮಲ್ಲಿಕಾರ್ಜುನ ಮ ಲಕ್ಷ್ಮೀಶ | ದೈಹಿಕ ಶಿಕ್ಷಣ ಬೋಧಕರು | ಶಾ ಎಸ್ ಪಿ ಓಸ್ವಾಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮುದ್ದೇಬಿಹಾಳ 586 212 ವಿಜಯಪುರ ಜಿಲ್ಲೆ | 02-07-2010 | 02-07-2010 | 7000 | 02-07-2016 | 02-07-2016 | ----------- |
| 22 | ಮಹಾದೇವಿ ಎಸ್ ಇಂಜಗನೇರಿ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನವನಗರ ಬಾಗಲಕೋಟೆ | 02-07-2010 | 02-07-2010 | 7000 | 02-07-2016 | 02-07-2016 | ----------- |
| 23 | ಅರವಿಂದ ಅಂಗಡಿ | ಆಂಗ್ಲಭಾಷೆ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಾದನ ಹಿಪ್ಪರಗಾ | 23-08-2010 | 23-08-2010 | 7000 | 23-08-2016 | 23-08-2016 | ----------------- |
| 24 | ದೀಪಕ್ ಕುಮಾರ | ಗ್ರಂಥಪಾಲಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಸವಕಲ್ಯಾಣ | 25-06-2010 | 25-06-2010 | 7000 | 25-06-2016 | 25-06-2016 | |
| 25 | ವಾಸ್ಯಾನಾಯ್ಕ ಬಿ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆಯನೂರು ಶಿವಮೊಗ್ಗ | 12-07-20C3 | 27-10-2007 | 7000 | 27-10-2013 | 27-10-2013 | ----------------- |
| 26 | ಪುಟ್ಟರಾಜು ಎನ್ | ಅರ್ಥಶಾಸ್ತ್ರ | ಸರ್ಕಾರಿ ಕಾಲೇಜು ಆಲೂರು ಹಾಸನ | 30-06-2004 | 26-02-2008 | 7000 | 26-02-2014 | 26-02-2014 | ----------------- |
| 27 | ಕವಿತ ಬಿ ಎನ್ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಣಸೂರು | 01-10-2009 | 01-10-2009 | 7000 | 01-10-2015 | 01-10-2015 | ----------------- |

(8)

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/-) ಮಂಜೂರು ಮಾಡಲಾಗಿರುವ ಪಟ್ಟಿ.

ಸಂಖ್ಯೆ : ಕಾಶಿಇ/01/ಎಜಿಪಿ/2018-19/ಬಸ್ಥಾವಿ, ದಿನಾಂಕ : 02.07.2018

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 28 | ಡಾ ತೇಜಸ್ವಿನಿ ಬಿ ಯಕ್ಕುಂಡಿಮಠ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಧಾರವಾಡ | 24-07-2006 | 24-07-2006 | 7000 | 24-07-2012 | 24-07-2012 | ---------------- |
| 29 | ಈರಯ್ಯ ಸಂ ಮಠಪತಿ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿಜಯಪುರ | 16-09-2009 | 16-09-2009 | 7000 | 16-09-2015 | 24-08-2017 | ಆರ್.ಸಿ. ಪೂರೈಸಿದ ಮರು ದಿನಾಂಕ : 24.08.2017 ರಿಂದ ಆರ್ಥಿಕ ಸೌಲಭ್ಯ ನೀಡಲಾಗಿದೆ. |
| 30 | ಗೌಡಪ್ಪ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಸ್ಕಿ | 01-02-2010 | 01-02-2010 | 7000 | 01-02-2016 | 01-02-2016 | ---------------- |
| 31 | ಕುಮಾರ ಸಿ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಾಲಿಗ್ರಾಮ | 25-06-2010 | 25-06-2010 | 7000 | 25-06-2016 | 25-06-2016 | ---------------- |
| 32 | ಮಾಧುರಿ ಮಾಳದ್‌ಕರ್ | ಆಂಗ್ಲಭಾಷಾ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬೀರೂರು | 12-07-2003 | 22-12-2007 | 7000 | 22-12-2013 | 22-12-2013 | ---------------- |
| 33 | ಕೊಟ್ರೇಶಿ ಹೆಚ್ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೂವಿನಹಡಗಲಿ | 25-06-2010 | 25-06-2010 | 7000 | 25-06-2016 | 25-06-2016 | ---------------- |
| 34 | ಶುಭ ಕೆ ಹೆಚ್ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮುಡಿಪು ಬಂಟ್ವಾಳ (ತಾ) | 25-06-2010 | 25-06-2010 | 7000 | 25-06-2016 | 25-06-2016 | ---------------- |

(9)

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/-) ಮಂಜೂರು ಮಾಡಲಾಗಿರುವ ಪಟ್ಟಿ.

ಸಂಖ್ಯೆ : ಕಾಶಿಇ/01/ಎಜಿಪಿ/2018-19/ಬಸ್ಥಾವಿ, ದಿನಾಂಕ : 02.07.2018

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 35 | ಶಿವಣ್ಣ | ರಾಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅರಕಲಗೂಡು ಹಾಸನ | 12-07-2003 | 18-02-2008 | 7000 | 18-02-2014 | 18-02-2014 | ---------------- |
| 36 | ಸುಲ್ತಾನಾ ಬೇಗಂ | ಗಣಿತಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಶಹಾಪೂರ | 07-09-2009 | 07-09-2009 | 7000 | 07-09-2015 | 07-09-2015 | ---------------- |
| 37 | ಮಂಜಮ್ಮ ಬಿ ಜಿ | ರಾಜ್ಯಶಾಸ್ತ್ರ | ಸರ್ಕಾರಿ ಕಲಾ ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು ಸ್ವಾಯತ್ತ ಹಾಸನ | 06-11-2003 | 30-01-2009 | 7000 | 30-01-2015 | 30-01-2015 | ---------------- |
| 38 | ಚಾಮರಾಜು ಕೆ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗುಂಡ್ಲುಪೇಟೆ | 17-07-2003 | 06-01-2008 | 7000 | 06-01-2014 | 06-01-2014 | ---------------- |
| 39 | ಸದಾನಂದ ಸಿದ್ಧಪ್ಪಾ ಮಹಾಜನ | ಅರ್ಥಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬೆಳಗಾವಿ | 08-10-2004 | 01-11-2008 | 7000 | 01-11-2014 | 01-11-2014 | ---------------- |
| 40 | ಡಾ ರಾಜಶ್ರೀ ಎಸ್ ಮಾರನೂರ | ಸಮಾಜಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಂಡಿ | 30-10-2007 | 30-10-2007 | 7000 | 30-10-2013 | 01-10-2015 | ಸದರಿಯವರು ಆರ್.ಸಿ. ಪೂರೈಸಿದ ಮರು ದಿನಾಂಕ : 01.10.2015 ರಿಂದ ಆರ್ಥಿಕ ಸೌಲಭ್ಯವನ್ನು ನೀಡಲಾಗಿದೆ. |

(10)

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/-) ಮಂಜೂರು ಮಾಡಲಾಗಿರುವ ಪಟ್ಟಿ.

ಸಂಖ್ಯೆ : ಕಾಶಿಇ/01/ಎಜಿಪಿ/2018-19/ಬಸ್ಥಾವಿ, ದಿನಾಂಕ : 02.07.2018

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 41 | ರೀಟಾ ಕೆ | ದೈಹಿಕ ಶಿಕ್ಷಣ ಬೋಧಕರು | ಜಿವಿಪಿಪಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಗರಿಬೊಮ್ಮನಹಳ್ಳಿ | 28-06-2010 | 28-06-2010 | 7000 | 28-06-2016 | 28-09-2016 | ---------------- |
| 42 | ಶಬ್ಬೀರ ಅಹ್ಮದ ಬ ತಟಗಾರ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಬೆಳಗಾವಿ | 30-06-2010 | 30-06-1010 | 7000 | 30-06-2016 | 30-06-2016 | ---------------- |
| 43 | ನಸೀಮ್ ಫಾತಿಮ | ಭೌತಶಾಸ್ತ್ರ | ಸರ್ಕಾರಿ ಮಹಾವಿದ್ಯಾಲಯ ಕಲಬುರಗಿ | 08-09-2009 | 08-09-2009 | 7000 | 08-09-2015 | 06-08-2017 | ಸದರಿಯವರು ಆರ್.ಸಿ. ಪೂರೈಸಿದ ಮರು ದಿನಾಂಕ : 06.08.2017 ರಿಂದ ಆರ್ಥಿಕ ಸೌಲಭ್ಯವನ್ನು ನೀಡಲಾಗಿದೆ. |
| 44 | ಡಾ ಕೆ ರಾಘವೇಂದ್ರ | ದೈಹಿಕ ಶಿಕ್ಷಣ ಬೋಧಕರು | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರಾಣೆಬೆನ್ನೂರು | 08-07-2010 | 08-07-2010 | 7000 | 08-07-2016 | 08-07-2016 | ---------------- |
| 45 | ಡಾ ರಾಜಕುಮಾರ ಗುರುಲಿಂಗಪ್ಪ ಬೆಣ್ಣಿ | ಗಣಕ ವಿಜ್ಞಾನ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಾಲ್ಕಿ | 03-09-2009 | 03-09-2009 | 7000 | 03-09-2015 | 03-09-2015 | ---------------- |
| 46 | ಪೂರ್ಣಿಮ ಎಸ್ ಕೆ | ರಸಾಯನಶಾಸ್ತ್ರ | ಮಹಿಳಾ ಸರ್ಕಾರಿ ಕಾಲೇಜು ಮಂಡ್ಯ | 03-09-2009 | 03-09-2009 | 7000 | 03-09-2015 | 03-09-2015 | |
| 47 | ಡಾ ಕವಿತಾ ಸಿ ವಿ | ರಸಾಯನಶಾಸ್ತ್ರ | ಮಹಿಳಾ ಸರ್ಕಾರಿ ಕಾಲೇಜು ಮಂಡ್ಯ | 03-09-2009 | 03-09-2009 | 7000 | 03-09-2015 | 03-09-2015 | |
| 48 | ಪಾಟಿಲ್ ನಟರಾಜ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೊಸಪೇಟೆ | 03-11-2003 | 26-04-2008 | 7000 | 26-04-2014 | 26-04-2014 | |

(11)

ವಿಶೇಷ ಸೂಚನೆ:ಎ.ಜಿ.ಪಿ. ಮಂಜೂರಾತಿ ಆದೇಶ ಸಂ :ಕಾಶಿಇ/01/ಎಜಿಪಿ/ಬಡ್ತಿ/18-19/ಬಸ್ಥಾವಿ ರ ಆದೇಶದಲ್ಲಿ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟಿರುತ್ತದೆ. AGP 26th Round (Jan,Feb,March'18)

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/-) ಮಂಜೂರು ಮಾಡಲಾಗಿರುವ ಪಟ್ಟಿ.

ಸಂಖ್ಯೆ : ಕಾಶಿಇ/01/ಎಜಿಪಿ/2018-19/ಬಸ್ಥಾವಿ, ದಿನಾಂಕ : 02.07.2018

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 49 | ಹೃಷಿಕೇಶ ಎಂ ಬೇವನೂರ | ರಾಜ್ಯಶಾಸ್ತ್ರ | ಮಹಾರಾಣಿ ಮಹಿಳಾ ಕಲಾ ವಾಣಿಜ್ಯ ಮತ್ತು ನಿರ್ವಹಣಾ ಮಹಾವಿದ್ಯಾಲಯ ಬೆಂಗಳೂರು | 28-07-2006 | 28-07-2006 | 7000 | 27-04-2013 | 27-04-2013 | ಸದರಿಯವರು ಅನಧಿಕೃತ ಗೈರು ಹಾಜರಾದ ಪ್ರಯುಕ್ತ ದಿನಾಂಕ : 27.04.2013ಕ್ಕೆ ಸೇವಾ ಪೂರ್ವ ಅವಧಿಯನ್ನು ವಿಸ್ತರಿಸಿ ಘೋಷಿಸಿರುವುದರಿಂದ ದಿನಾಂಕ : 27.04.2013 ರಿಂದ ಎ.ಜಿ.ಪಿ. ಅರ್ಹತಾ ದಿನಾಂಕವೆಂದು ಪರಿಗಣಿಸಿ ಅದೇ ದಿನಾಂಕದಿಂದ ಆರ್ಥಿಕ ಸೌಲಭ್ಯವನ್ನು ನೀಡಲಾಗಿದೆ. |
| 50 | ಡಾ ಪ್ರಸನ್ನ ಕುಮಾರಿ ಕೆ | ಸಮಾಜಶಾಸ್ತ್ರ | ಸರ್ಕಾರಿ ಕಾನೂನು ಕಾಲೇಜು ಕೋಲಾರ | 05-09-2009 | 05-09-2009 | 7000 | 05-09-2013 | 13-10-2013 | ಸದರಿಯವರು ಎನ್.ಇ.ಟಿ. ಆಧಾರದ ಮೇಲೆ ನೇಮಕಾತಿಗೊಂಡಿದ್ದು, ಪಿಹೆಚ್.ಡಿ. ಪದವಿಯನ್ನು ದಿನಾಂಕ:25.07.2005 ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿ ಪೂರೈಸಿರುವ ಪ್ರಯುಕ್ತ ಎ.ಜಿ.ಪಿ.ಯಲ್ಲಿ ಸೇವಾ ವಿನಾಯಿತಿ ನೀಡಲು ಶಿಫಾರಸ್ಸು ಮಾಡಲಾಗಿದೆ. ಪಿಹೆಚ್.ಡಿ. ಪದವಿಗಾಗಿ ಯಾವುದೇ ಮುಂಗಡ ವೇತನ ಬಡ್ತಿ ಪಡೆದಿರುವುದಿಲ್ಲವೆಂಬ ಸದರಿಯವರ ಪತ್ರ ಹಾಗೂ ಸಮಿತಿಯ ಶಿಫಾರಸ್ಸಿನ ಮೇರೆಗೆ ಪಿಹೆಚ್.ಡಿ. ಪದವಿಯನ್ನು ಪರಿಗಣಿಸಿ 02 ವರ್ಷಗಳ ಸೇವಾ ವಿನಾಯಿತಿ ನೀಡಲಾಗಿದೆ ಹಾಗೂ ಆರ್.ಸಿ. ಪೂರೈಸಿದ ಮರು ದಿನಾಂಕ : 13.10.2013 ರಿಂದ ಆರ್ಥಿಕ ಸೌಲಭ್ಯ ನೀಡಲಾಗಿದೆ. |
| 51 | ರೇಖಾ ಚವ್ಹಾಣ | ಕಾನೂನು ಸಹಾಯಕ ಪ್ರಾಧ್ಯಾಪಕರು | ಸರ್ಕಾರಿ ಕಾನೂನು ಕಾಲೇಜು ಹಾಸನ | 03-09-2009 | 03-09-2009 | 7000 | 09-10-2013 | 09-10-2013 | ಸದರಿಯವರು ಎನ್.ಇ.ಟಿ. ಆಧಾರದ ಮೇಲೆ ನೇಮಕಾತಿಗೊಂಡಿದ್ದು, ಪಿಹೆಚ್.ಡಿ. ಪದವಿಯನ್ನು ದಿನಾಂಕ : 09.10.2013 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿ ಪೂರೈಸಿರುವ ಪ್ರಯುಕ್ತ ಎ.ಜಿ.ಪಿ.ಯಲ್ಲಿ ಸೇವಾ ವಿನಾಯಿತಿ ನೀಡಲು ಶಿಫಾರಸ್ಸು ಮಾಡಲಾಗಿದೆ. ಪಿಹೆಚ್.ಡಿ. ಪದವಿಗಾಗಿ ಯಾವುದೇ ಮುಂಗಡ ವೇತನ ಬಡ್ತಿ ಪಡೆದಿರುವುದಿಲ್ಲವೆಂಬ ಸದರಿಯವರ ಪತ್ರ ಹಾಗೂ ಸಮಿತಿಯ ಶಿಫಾರಸ್ಸಿನ ಮೇರೆಗೆ ಪಿಹೆಚ್.ಡಿ. ಪಡೆದ ದಿನಾಂಕ : 09.10.2013 ರಿಂದ ಎ.ಜಿ.ಪಿ.ಗೆ ಪರಿಗಣಿಸಿ 02 ವರ್ಷಗಳ ಸೇವಾ ವಿನಾಯಿತಿ ನೀಡಲಾಗಿದೆ. |

(12)

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600–39100 ರಲ್ಲಿ ಎ.ಜಿ.ಪಿ ರೂ.6000/– ರಿಂದ ರೂ.7000/–) ಮಂಜೂರು ಮಾಡಲಾಗಿರುವ ಪಟ್ಟಿ.

ಸಂಖ್ಯೆ : ಕಾಶಿಇ/01/ಎಜಿಪಿ/2018-19/ಬಸ್ಥಾವಿ, ದಿನಾಂಕ : 02.07.2018

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 52 | ಡಾ ದುಗ್ಗಪ್ಪ ಕಜೆಕಾರ್ | ಸಮಾಜಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತೆಂಕನಿಡಿಯೂರು ಉಡುಪಿ ಜಿಲ್ಲೆ | 31-07-2006 | 31-07-2006 | 7000 | 31-07-2011 | 31-07-2011 | ಸದರಿಯವರು ಎಸ್.ಎಲ್.ಇ.ಟಿ. ಆಧಾರದ ಮೇಲೆ ನೇಮಕಾತಿಗೊಂಡಿದ್ದು, ಎಂ.ಫಿಲ್. ಪದವಿಯನ್ನು 1997 ರಲ್ಲಿ ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು ಇಲ್ಲಿ ಪೂರೈಸಿರುವುದರಿಂದ ಪ್ರಯುಕ್ತ ಎ.ಜಿ.ಪಿ.ಯಲ್ಲಿ ಸೇವಾ ವಿನಾಯಿತಿ ನೀಡಲು ಶಿಫಾರಸ್ಸು ಮಾಡಲಾಗಿದೆ. ಎಂ.ಫಿಲ್. ಪದವಿಗಾಗಿ ಯಾವುದೇ ಮುಂಗಡ ವೇತನ ಬಡ್ತಿ ಪಡೆದಿರುವುದಿಲ್ಲವೆಂಬ ಸದರಿಯವರ ಪತ್ರ ಹಾಗೂ ಸಮಿತಿಯ ಶಿಫಾರಸ್ಸಿನ ಮೇರೆಗೆ ಎಂ.ಫಿಲ್. ಪದವಿಯನ್ನು ಪರಿಗಣಿಸಿ 01 ವರ್ಷಗಳ ಸೇವಾ ವಿನಾಯಿತಿ ನೀಡಲಾಗಿದೆ. |
| 53 | ಡಾ ಸಂತೋಷ | ವಾಣಿಜ್ಯಶಾಸ್ತ್ರ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚಿಂಚೋಳಿ | 05-09-2009 | 05-09-2009 | 7000 | 05-09-2013 | 20-09-2013 | ಸದರಿಯವರು ಎಂ.ಫಿಲ್. ಆಧಾರದ ಮೇಲೆ ನೇಮಕಾತಿಗೊಂಡಿದ್ದು, ಪಿಹೆಚ್.ಡಿ. ಪದವಿಯನ್ನು ದಿನಾಂಕ : 30.01.2008 ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ ಇಲ್ಲಿ ಪೂರೈಸಿರುವ ಪ್ರಯುಕ್ತ ಎ.ಜಿ.ಪಿ.ಯಲ್ಲಿ ಸೇವಾ ವಿನಾಯಿತಿ ನೀಡಲು ಶಿಫಾರಸ್ಸು ಮಾಡಲಾಗಿದೆ. ಪಿಹೆಚ್.ಡಿ. ಪದವಿಗಾಗಿ ಯಾವುದೇ ಮುಂಗಡ ವೇತನ ಬಡ್ತಿ ಪಡೆದಿರುವುದಿಲ್ಲವೆಂಬ ಸದರಿಯವರ ಪತ್ರ ಹಾಗೂ ಸಮಿತಿಯ ಶಿಫಾರಸ್ಸಿನ ಮೇರೆಗೆ ಪಿಹೆಚ್.ಡಿ. ಪದವಿಯನ್ನು ಪರಿಗಣಿಸಿ 02 ವರ್ಷಗಳ ಸೇವಾವಿನಾಯಿತಿ ನೀಡಲಾಗಿದೆ. ಆರ್.ಸಿ. ಪೂರೈಸಿದ ಮರು ದಿನಾಂಕ : 20.09.2013 ರಿಂದ ಆರ್ಥಿಕ ಸೌಲಭ್ಯ ನೀಡಲಾಗಿದೆ. |

(13)

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/-) ಮಂಜೂರು ಮಾಡಲಾಗಿರುವ ಪಟ್ಟಿ.

ಸಂಖ್ಯೆ : ಕಾಶಿಇ/01/ಎಜಿಪಿ/2018-19/ಬಸ್ಥಾವಿ, ದಿನಾಂಕ : 02.07.2018

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 54 | ಡಾ ವಿಜಯಕುಮಾರ ಭೀಮಪ್ಪ ನಾಯಕ | ಗ್ರಂಥಪಾಲಕರು | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಬೆಳಗಾವಿ | 08-02-2008 | 08-02-2008 | 7000 | 29-01-2013 | 23-04-2013 | ಸದರಿಯವರು ಎನ್.ಇ.ಟಿ. ಆಧಾರದ ಮೇಲೆ ನೇಮಕಾತಿಗೊಂಡಿದ್ದು, ಪಿಹೆಚ್.ಡಿ. ಪದವಿಯನ್ನು ದಿನಾಂಕ : 29.01.2013 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿ ಪೂರೈಸಿರುವ ಪ್ರಯುಕ್ತ ಎ.ಜಿ.ಪಿ.ಯಲ್ಲಿ ಸೇವಾ ವಿನಾಯಿತಿ ನೀಡಲು ಶಿಫಾರಸ್ಸು ಮಾಡಲಾಗಿದೆ. ಪಿಹೆಚ್.ಡಿ. ಪದವಿಗಾಗಿ ಯಾವುದೇ ಮುಂಗಡ ವೇತನ ಬಡ್ತಿ ಪಡೆದಿರುವುದಿಲ್ಲವೆಂಬ ಸದರಿಯವರ ಪತ್ರ ಹಾಗೂ ಸಮಿತಿಯ ಶಿಫಾರಸ್ಸಿನ ಮೇರೆಗೆ ಪಿಹೆಚ್.ಡಿ. ಪಡೆದ ದಿನಾಂಕ : 29.01.2013 ರಿಂದ ಸೇವಾವಿನಾಯಿತಿ ನೀಡಲಾಗಿದೆ. ಆರ್.ಸಿ. ಪೂರೈಸಿದ ಮರು ದಿನಾಂಕ : 23.04.2013 ರಿಂದ ಆರ್ಥಿಕ ಸೌಲಭ್ಯ ನೀಡಲಾಗಿದೆ. |
| 55 | ಡಾ ಕಾಳಿಂಗ ಡಿ ಗೊಳಸಂಗಿ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗೊಳಸಂಗಿ | 20-07-2006 | 20-07-2006 | 7000 | 20-07-2011 | 20-07-2011 | ಸದರಿಯವರು ಎನ್.ಇ.ಟಿ. ಆಧಾರದ ಮೇಲೆ ನೇಮಕಾತಿಗೊಂಡಿದ್ದು, ಎಂ.ಫಿಲ್. ಪದವಿಯನ್ನು ದಿನಾಂಕ: 28.12.1996 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿ ಪೂರೈಸಿರುವುದರಿಂದ ಪ್ರಯುಕ್ತ ಎ.ಜಿ.ಪಿ.ಯಲ್ಲಿ ಸೇವಾ ವಿನಾಯಿತಿ ನೀಡಲು ಶಿಫಾರಸ್ಸು ಮಾಡಲಾಗಿದೆ. ಎಂ.ಫಿಲ್.ಗಾಗಿ ಯಾವುದೇ ಮುಂಗಡ ವೇತನ ಬಡ್ತಿ ಪಡೆದಿರುವುದಿಲ್ಲವೆಂಬ ಸದರಿಯವರ ಪತ್ರ ಹಾಗೂ ಸಮಿತಿಯ ಶಿಫಾರಸ್ಸಿನ ಮೇರೆಗೆ ಎಂ.ಫಿಲ್. ಪದವಿಯನ್ನು ಪರಿಗಣಿಸಿ 01 ವರ್ಷಗಳ ಸೇವಾ ವಿನಾಯಿತಿ ನೀಡಲಾಗಿದೆ. |
| 56 | ಗಣೇಶ | ಕನ್ನಡ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗುಂಡ್ಲುಪೇಟೆ | 25-09-2009 | 25-09-2009 | 7000 | 25-09-2014 | 25-09-2014 | ಸದರಿಯವರು ಎನ್.ಇ.ಟಿ. ಆಧಾರದ ಮೇಲೆ ನೇಮಕಾತಿಗೊಂಡಿದ್ದು, ಎಂ.ಫಿಲ್. ಪದವಿಯನ್ನು ದಿನಾಂಕ : 01.12.2011 ರಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇಲ್ಲಿ ಪೂರೈಸಿರುವ ಪ್ರಯುಕ್ತ ಈ ಕಛೇರಿ ದಿನಾಂಕ : 04.11.2017ರ ಸಂಖ್ಯೆ : ಕಾಶಿಇ/199/ಮುವೇಬ/ಸೇವಿ-1/2010-11ರ ಆದೇಶದಲ್ಲಿ ಈಗಾಗಲೇ ಮಂಜೂರಾಗಿದ್ದ ಎಂ.ಫಿಲ್. ಮುಂಗಡ ವೇತನ ಬಡ್ತಿ ರದ್ದು ಗೊಳಿಸಿರುವುದರಿಂದ ಎಂ.ಫಿಲ್. ಪದವಿಯನ್ನು ಪರಿಗಣಿಸಿ ಎ.ಜಿ.ಪಿ.ಯಲ್ಲಿ 01 ವರ್ಷಗಳ ಸೇವಾ ವಿನಾಯಿತಿ ನೀಡಲಾಗಿದೆ. |

(14)

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ಎ.ಪಿ.ಐ ಆಧಾರಿತ ವೃತ್ತಿ ಪದೋನ್ನತಿ (ವೇ.ಶ್ರೇ.ರೂ.15600-39100 ರಲ್ಲಿ ಎ.ಜಿ.ಪಿ ರೂ.6000/- ರಿಂದ ರೂ.7000/-) ಮಂಜೂರು ಮಾಡಲಾಗಿರುವ ಪಟ್ಟಿ.

ಸಂಖ್ಯೆ : ಕಾಶಿಇ/01/ಎಜಿಪಿ/2018-19/ಬಸ್ಥಾವಿ, ದಿನಾಂಕ : 02.07.2018

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 57 | ಡಾ ಮಲ್ಲಿಕಾರ್ಜುನ ಶೆಟ್ಟಿ | ಇತಿಹಾಸ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸುರಪುರ | 03-09-2009 | 03-09-2009 | 7000 | 03-09-2013 | 12-10-2013 | ಸದರಿಯವರು ಎಂ.ಫಿಲ್. ಆಧಾರದ ಮೇಲೆ ನೇಮಕಾತಿಗೊಂಡಿದ್ದು, ಪಿಹೆಚ್.ಡಿ. ಪದವಿಯನ್ನು ದಿನಾಂಕ : 08.02.2013 ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ ಇಲ್ಲಿ ಪೂರೈಸಿರುವ ಪ್ರಯುಕ್ತ ಈ ಕಛೇರಿ ದಿನಾಂಕ : 04.11.2017ರ ಸಂಖ್ಯೆ : ಕಾಶಿಇ/199/ಮುವೇಬ/ಸೇವಿ-1/2010-11ರ ಆದೇಶದಲ್ಲಿ ಈಗಾಗಲೇ ಮಂಜೂರಾಗಿದ್ದ ಪಿಹೆಚ್.ಡಿ. ಮುಂಗಡ ವೇತನ ಬಡ್ತಿ ರದ್ದುಗೊಳಿಸಿರುವುದರಿಂದ ಪಿಹೆಚ್.ಡಿ. ಪದವಿಯನ್ನು ಪರಿಗಣಿಸಿ ಎ.ಜಿ.ಪಿ.ಯಲ್ಲಿ 02 ವರ್ಷಗಳ ಸೇವಾ ವಿನಾಯಿತಿ ನೀಡಲಾಗಿದೆ ಹಾಗೂ ಆರ್.ಸಿ. ಪೂರೈಸಿದ ಮರು ದಿನಾಂಕ : 12.10.2013 ರಿಂದ ಆರ್ಥಿಕ ಸೌಲಭ್ಯ ನೀಡಲಾಗಿದೆ. |

**(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

(15)